## ದೂರದರ್ಶನ ದೂರ ಸರಿಯುತ್ತಿದೆಯೇ?

ಅಪಾರ ಮೂಲಭೂತ ಸೌಕರ್ಯ, ಮಾನವ ಸಂಪನ್ಮೂಲ ಮತ್ತು ಸರ್ಕಾರದ ಬೃಹತ್ ಹಣಕಾಸು ನೆರವಿನ ಹೊರತಾಗಿಯೂ ದೂರದರ್ಶನ ವೀಕ್ಷಕರಿಂದ ದೂರವಾಗುತ್ತಿದೆ. ಖಾಸಗಿ ವಾಹಿನಿಗಳ ಕಾರ್ಯಕ್ರಮಗಳ ಮುಂದೆ ಮಂಕಾಗಿ ಮತ್ತು ನೀರಸವಾಗಿ ಕಾಣುತ್ತದೆ ಎನ್ನುವ ಅಭಿಪ್ರಾಯ ದೃಶ್ಯ ಮಾಧ್ಯಮ ಲೋಕದಲ್ಲಿ ಇತ್ತೀಚೆಗೆ ಕೇಳಿಬರುತ್ತಿದೆ. ಒಂದು ವರದಿಯ ಪ್ರಕಾರ ಅದರ ವೀಕ್ಷಕರ ಸಂಖ್ಯೆಯಲ್ಲಿ ಏರಿಕೆ ಕಂಡುಬಂದಿಲ್ಲ. ಹಲವು ಕಾರಣಗಳಿಗಾಗಿ ಕೇಬಲ್ ಸಂಪರ್ಕ ಪಡೆಯಲಾಗದವರು ದೂರದರ್ಶನಕ್ಕೆ ಮೊರೆ ಹೋಗುತ್ತಾರೆ ಮತ್ತು ಜನಪ್ರಿಯ ಕ್ರಿಕೆಟ್ ಪಂದ್ಯಾವಳಿಗಳು ಖಾಸಗಿ ವಾಹಿನಿಗಳಲ್ಲಿ ಪ್ರಸಾರವಾಗದೇ ಕೇವಲ ದೂರದರ್ಶನದಲ್ಲಿ ಮಾತ್ರ ಪ್ರಸಾರವಾದಾಗ ಅದರ ವೀಕ್ಷಕರ ಸಂಖ್ಯೆ ಹೆಚ್ಚಾಗುತ್ತದೆ ಎನ್ನುವ ಅಭಿಪ್ರಾಯದಲ್ಲಿ ಅರ್ಥವಿಲ್ಲದಿಲ್ಲ.

ಕಾರಣ ದೂರದರ್ಶನ ಸರ್ಕಾರದ ಮುಖವಾಣಿಯಾಗಿ ಕಾರ್ಯ ನಿರ್ವಹಿಸುವುದು. ವೀಕ್ಷಕರಿಗೆ ಏನು ಬೇಕು ಎನ್ನುವುದಕ್ಕಿಂತ ಸರ್ಕಾರಕ್ಕೆ ಏನು ಬೇಕು ಎನ್ನುವುದಕ್ಕೆ ಇಲ್ಲಿ ಆದ್ಯತೆ. ಕಾಲಕ್ಕೆ ತಕ್ಕಂತೆ ತಾಂತ್ರಿಕತೆ ಮತ್ತು ವೈವಿಧ್ಯತೆಯಲ್ಲಿ ಬದಲಾವಣೆಗೆ ಹೊಂದಿಕೊಂಡು ಬದಲಾಗದಿರುವ ಜಡತ್ವ ಎನ್ನಬಹುದು. ಖಾಸಗಿ ವಾಹಿನಿಗಳ ವೈವಿಧ್ಯ ಕಾರ್ಯಕ್ರಮಗಳನ್ನು ಮತ್ತು ಅವರ ಸುದ್ದಿ ಪ್ರಸಾರದ ವೈಖರಿ ಮತ್ತು ಶೈಲಿಯನ್ನು ಒಮ್ಮೆ ಅನುಭವಿಸಿದವರು ಸರ್ಕಾರಿ ನಿಯಂತ್ರಿತ ದೂರದರ್ಶನದ ಕಡೆ ಕಣ್ಣು ಹಾಯಿಸುವುದಿಲ್ಲ. ದೂರದರ್ಶನದ ಸಂಪೂರ್ಣ ನಿಯಂತ್ರಣ ದೆಹಲಿಯಲ್ಲಿದ್ದು, ಪ್ರಾದೇಶಿಕ ಕೇಂದ್ರಗಳಿಗೆ ಕಾರ್ಯಕ್ರಮ ಪ್ರಸಾರದಲ್ಲಿ ಸಾಕಷ್ಟು ಸ್ವಾತಂತ್ರ್ಯ ಇಲ್ಲ ಎನ್ನುವ ಮಾತುಗಳು ಕೇಳಿಬರುತ್ತಿವೆ. ಸುದ್ದಿ ಪ್ರಸಾರದಲ್ಲಂತೂ ಸರ್ಕಾರಿ ವಕ್ತಾರರ ಹೇಳಿಕೆಗಳಂತೆ ಇರುತ್ತದೆ ಎನ್ನುವ ಟೀಕೆ ಸದಾ ಕೇಳಿಬರುತ್ತಿದೆ. ಅಂತೆಯೇ ಸರ್ಕಾರವೇ ದೂರದರ್ಶನವನ್ನು ನಡೆಸಿಕೊಂಡು ಹೋಗಬೇಕೇ ಎನ್ನುವ ಚರ್ಚೆ ಕೂಡಾ ಪದೇ ಪದೇ ಕೇಳಿಬರುತ್ತಿದೆ.

–ರಮಾನಂದ ಶರ್ಮಾ, ಬೆಂಗಳೂರು

## ವಾರದ ಪತ್ರ

### ಪಲಾಯನವಾದ!

'ಟಿಆರ್‌ಪಿಗಾಗಿ ಟಿವಿಯವರು ಕೆಟ್ಟ, ಅಭಿವೃದ್ಧಿಹೀನ ಮತ್ತು ಉಪಯೋಗವಿಲ್ಲದ ಕಾರ್ಯಕ್ರಮ ತೋರಿಸುತ್ತಾರೆ ಎಂದು ಜನ ಹೇಳುತ್ತಾರೆ. ವಿಚಿತ್ರವೆಂದರೆ, ಅದನ್ನೇ ಬಾಯಿ ಚಪ್ಪರಿಸಿಕೊಂಡು ನೋಡಿ ಆಸಕ್ತಿ ವ್ಯಕ್ತಪಡಿಸುತ್ತಾರೆ' ಇದು ಕನ್ನಡದ ಸುದ್ದಿವಾಹಿನಿಯೊಂದರ ಮುಖ್ಯಸ್ಥರ ಬಾಯಿಯಿಂದ ಉದುರಿದ ಆಣಿಮುತ್ತು!

ಆ ಮುಖ್ಯಸ್ಥರಿಗೆ ನನ್ನ ಕೆಲವು ಪ್ರಶ್ನೆಗಳು. ಜನರು ಬಾಯಿ ಚಪ್ಪರಿಸುವುದನ್ನು ನೀವು ಎಸಿ ಚೇಂಬರಿನಿಂದ ಹೊರಬಂದು ನೋಡಿದ್ದೀರಾ? ನಗಣ್ಯ ಸಂಖ್ಯೆಯ ವೀಕ್ಷಕರ ಆಯ್ಕೆಯನ್ನೇ ಸಾರ್ವತ್ರೀಕರಿಸಿ ಖಾಸಗಿ ಸಂಸ್ಥೆಯೊಂದು ನಿಮಗೆ ನೀಡುವ ಟಿಆರ್‌ಪಿ ಪಟ್ಟಿಯು ಕೋಟ್ಯಂತರ ವೀಕ್ಷಕರ ಒಟ್ಟು ಅಭಿಪ್ರಾಯವಾಗಿರಲು ಸಾಧ್ಯವೆ? ಉತ್ತಮ ಆಯ್ಕೆಯ ಅವಕಾಶವಿಲ್ಲದೆ, ಕಾಲಕ್ಷೇಪವಾಗಿ ಅದೇ ನಿರುಪಯುಕ್ತ, ಕೃತಿಮ, ಮಸಾಲೆಭರಿತ, ಹಳಸಲು ಕಾರ್ಯಕ್ರಮಗಳನ್ನೇ ಟಿವಿಯಲ್ಲಿ ನೋಡಬೇಕಾದ ಅನಿವಾರ್ಯವನ್ನು ಜನರಿಗೆ ತಂದಿಟ್ಟಿರುವುದು ಸೂತ್ರಧಾರರಾದ ನೀವುಗಳು ತಾನೆ? ಉತ್ತಮ ಕಾರ್ಯಕ್ರಮವನ್ನು ಜನರು ಮೆಚ್ಚುವುದಿಲ್ಲವೆಂದು ಯಾವ ಆಧಾರದಿಂದ ಹೇಳಬಲ್ಲಿರಿ? ಅಂತಹ ಕಾರ್ಯಕ್ರಮಗಳನ್ನು ಸಾಕಷ್ಟು ಪ್ರಮಾಣದಲ್ಲಿ ಗಣನೀಯ ಅವಧಿವರೆಗೆ ಕೊಟ್ಟು ನೋಡಿದ್ದೀರಾ? ಜನರ ಮತ್ತು ಸಾಮಾಜಿಕ ನಡೆಗಳ ನರನಾಡಿಯ ಮಿಡಿತದ ಅರಿವು ನಿಮಗಿದೆಯೆ? ಸುಮ್ಮನೆ ಜನರ ಮೇಲೆ ಗೂಬೆ ಕೂರಿಸುವುದು ನಿಮ್ಮ ಪಲಾಯನವಾದವಲ್ಲವೆ? ಜನಕೋಟಿಯ ಅಭಿರುಚಿ ಮತ್ತು ಬುದ್ಧಿಮಟ್ಟವನ್ನು ಕೀಳಂದಾಜಿಸುವ ಮೂಲಕ ನೀವು ಅನ್ನದಾತ ಜನಕೋಟಿಗೆ ಅವಮಾನ ಎಸಗುತ್ತಿದ್ದೀರಲ್ಲವೆ?

**-ಎಚ್.ಆನಂದರಾಮ ಶಾಸ್ತ್ರಿ, ಬೆಂಗಳೂರು**

## ವೈದ್ಯರ ವಿಶೇಷ ಕಾರ್ಯಕ್ರಮ

ದಿನಾಂಕ 01.07.16 ರಂದು ಚಂದನ ವಾಹಿನಿಯಲ್ಲಿ ಬಿತ್ತರವಾದ ಥಟ್ ಅಂತ ಹೇಳಿ ಕಾರ್ಯಕ್ರಮ ಚೆನ್ನಾಗಿತ್ತು. ವಿಕಿರಣ ತಜ್ಞರಾದ ಡಾ. ರಮೇಶ್ ಎಸ್. ಬಿಳಿಮಗ್ಗ 6 ವರ್ಷಗಳ ಹಿಂದೆ ಸ್ವಯಂಪ್ರೇರಿತರಾಗಿ ಕುಟುಂಬದ ಅಭಿಪ್ರಾಯ ಪಡೆದು ತಮ್ಮ ಮೂತ್ರಪಿಂಡವನ್ನು ಮಿತ್ರ ಕಿಲಾರೆ ಅವರಿಗೆ ದಾನ ಮಾಡಿದ್ದು ಶ್ಲಾಘನೀಯ. ಈಗಲೂ ಆರೋಗ್ಯಕರ ಜೀವನ ನಡೆಸುತ್ತಿದ್ದು ಮಾನಸ ಸರೋವರ ಪರಿಕ್ರಮ, 18 ಸಾವಿರ ಅಡಿ ಎತ್ತರದ ಗೌರಿಶಂಕರ ಬೇಸ್ ಕ್ಯಾಂಪ್‌ಗೆ ಟ್ರೆಕ್ಕಿಂಗ್ ಹೋಗಿ ಬಂದಿರುವುದು ಅಂಗದಾನ ಮಾಡಬೇಕೆನ್ನುವವರಿಗೆ ಮಾದರಿ.

ಪದ್ಮಶ್ರೀ ಪುರಸ್ಕೃತ, ಬಿ.ಸಿ. ರಾಯ್ ರಾಷ್ಟ್ರೀಯ ಪ್ರಶಸ್ತಿ ಪಡೆದ ಕ್ಯಾನ್ಸರ್ ತಜ್ಞ ಡಾ. ಗೋಪಿನಾಥ್‌ರವರು ಪ್ರತಿಷ್ಠಾನವೊಂದರ ಸಂಘಟಕರಾಗಿ ಕ್ಯಾನ್ಸರ್‌ನಿಂದಾಗಿ ಗುದದ್ವಾರ ಮತ್ತು ಮೂತ್ರ ರೋಗದ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡವರಿಗೆ ಧೈರ್ಯ ತುಂಬುತ್ತಿರುವ ಕಾರ್ಯ ಮೆಚ್ಚುವಂತಹದ್ದು. ವೃತ್ತಿಯಿಂದಲೂ ಆಚೆ ಸಮಾಜಕ್ಕೆ ಒಳಿತನ್ನು ಮಾಡುವ ಇವರಿಬ್ಬರ ಕಳಕಳಿ ಮಾದರಿಯಾಗಿದೆ.

–ಕೆ.ಎಸ್. ಪ್ರಭಾಕರ ಗುಪ್ತ, ಹಾಸನ

## ಶ್ರೀ ರಸ್ತು... ಶುಭ ಸಮಾಪ್ತಿ

ಝೀನಲ್ಲಿ ಶ್ರುತಿ ನಾಯ್ಡು ನಿರ್ದೇಶನದಲ್ಲಿ ಮೂಡಿ ಬರುತ್ತಿದ್ದ ಸಾಂಸಾರಿಕ ಧಾರಾವಾಹಿ 'ಶ್ರೀರಸ್ತು ಶುಭಮಸ್ತು' ಸುಖಾಂತ್ಯದಲ್ಲಿ ಮುಕ್ತಾಯವಾಗಿದೆ.

ಏನೇ ಕಷ್ಟ ಬಂದರೂ ಸಂಸಾರದ ಒಳಿತಿಗಾಗಿ ಕಷ್ಟಪಡುವ ಜಾನು ಪಾತ್ರ ಗಮನ ಸೆಳೆಯುವಂತಹದು. ಕೊನೆಯ ಕೆಲವು ಕಂತುಗಳಲ್ಲಿ ಕಣ್ಮರೆಯಾದ ಶ್ರೀ, ಅತ್ತೆಯಂದಿರ ಮದುವೆಯನ್ನು ಮಾಡಿಸಲು ಜಾನು ಹುಡುಕುವ ಸಂಗಾತಿಗಳು, ಜಾನು ತಮ್ಮನ ಮದುವೆಯಾಗುವ ಹುಡುಗಿ, ಜಾನು ಅಮ್ಮ, ಜೈಜಗದೀಶ್ ಅವರೆಲ್ಲ ಧಾರಾವಾಹಿಯ ಅಂತ್ಯದಲ್ಲಿ ಆರು ಜನ ಅತ್ತೆಯಂದಿರ ಜೊತೆ ಸಂಭ್ರಮದಲ್ಲಿ ಭಾಗಿಯಾಗಿದ್ದರೆ ಅಂತ್ಯಕ್ಕೆ ಮತ್ತಷ್ಟು ಮೆರುಗು ಬರುತ್ತಿತ್ತು.

–ವಿಭಾ ಮುರಳೀಧರ್, ತುಮಕೂರು

## ಇಣುಕಿರುವ ತಪ್ಪು

ಸುವರ್ಣದಲ್ಲಿ 1.7.16 ರಂದು ಪ್ರಸಾರವಾದ 'ಗುಂಡ್ಯಾನ ಹೆಂಡ್ತಿ'ಯಲ್ಲಿ ಒಂದು ಸಣ್ಣ ತಪ್ಪು ಇಣುಕಿದೆ ಎಂದು ನನ್ನ ಅನಿಸಿಕೆ. ವಾಡೆಯ ಅತ್ತೆವ್ವ ಹಾಗೂ ಆಕೆಯ ಪ್ರೀತಿಯ ಮೊಮ್ಮಗ ಗುಂಡ್ಯಾ, ಇಬ್ಬರೂ ಮೃತರಾಗಿದ್ದುದರಿಂದ, ಅಲ್ಲಿ 'ಸೂತಕದ' ವಾತಾವರಣ. ಮನೆಯಲ್ಲಿ ಎಲ್ಲರೂ ದುಃಖದಿಂದಿರುತ್ತಾರೆ. ವಾಡೆಯ ಹಿರಿಯ ಸೊಸೆ ಸುನಂದಾ ಮಾತ್ರ ಸೂತಕದ ಕಾರಣ, ಬರೀ ಹಣೆಯಲ್ಲಿ ಇರುತ್ತಾಳೆ. ಕಿರಿಯ ಸೊಸೆಯಂದಿರು ಅಲಂಕಾರ ಭೂಷಿತರಾಗಿರುತ್ತಾರೆ. ಇದು ಸಂದರ್ಭಕ್ಕೆ ವ್ಯತಿರಿಕ್ತವಾದ ಚಿತ್ರಣವೆನಿಸುವುದಿಲ್ಲವೇ? ಸೂತಕ ಆ ಮನೆ ಮಂದಿಗೆ ಮತ್ತು ಹಿರಿಯ ಸೊಸೆ ಸುನಂದಾಗೆ ಮಾತ್ರ ಅಲ್ಲವೇ?

–ಸುಂದರ್, ಬೆಂಗಳೂರು

## ಆತ್ಮಾವಲೋಕನ ಮಾಡಿಕೊಳ್ಳಲಿ

ಝೀ ಟಿವಿಯ 'ಡ್ರಾಮಾ ಜ್ಯೂನಿಯರ್ಸ್' ಕರ್ನಾಟಕದ ಜನತೆಯ ಮನಸ್ಸನ್ನು ಸೂರೆಗೊಂಡಿದೆ. 'ಕ್ರಿಮಿನಲ್ ಕ್ವೀನ್'ಗಳ ನಾಯಕತ್ವದ, ನಿಸ್ಸಾರ ಕತೆಗಳ, ಚ್ಯೂಯಿಂಗ್ ಗಮ್ ಧಾರಾವಾಹಿಗಳಿಂದ ಬೇಸತ್ತಿದ್ದ ಕನ್ನಡಿಗರಿಗೆ 'ಡ್ರಾಮಾ ಜ್ಯೂನಿಯರ್ಸ್'ನ ಮಕ್ಕಳ ಚಟಪಟ ಪಟಾಕಿ ಸಂಭಾಷಣೆ, ರಸಭರಿತ ಅಭಿನಯ ಸಖತ್ ಖುಷಿ ನೀಡುತ್ತಿದೆ. ಐದು ನಿಮಿಷಗಳ ಈ ಚಿಕ್ಕ ನಾಟಕಗಳನ್ನು ಬಹುಶಃ 5–10 ವರ್ಷವಾದರೂ ಯಾರೂ ಮರೆಯಲಾರರು.

ಜನ ಮಾನಸದಿಂದ ಮರೆತೇ ಹೋಗಿದ್ದ ಹರಿಕಥೆ, ಪೌರಾಣಿಕ ನಾಟಕಗಳಿಗೆ ಜೀವ ತುಂಬಿದ ಬಾಲ ಕಲಾವಿದರು, ಪ್ರತಿಭೆಗೆ ವೇದಿಕೆ ದೊರಕಿಸಿಕೊಟ್ಟ ಝೀ ಟಿವಿಯ ಪ್ರಯತ್ನ, ಮಕ್ಕಳಾಡುವ ಅಚ್ಚ ಕನ್ನಡದ ಮಾತುಗಳು ಪ್ರಶಂಸನಾರ್ಹ.

–ಇಂದು, ತಿಪಟೂರು

## ಗೌರಿ ಸಮಸ್ಯೆ

'ಪುಟ್ಟ ಗೌರಿ ಮದುವೆ' ಎಂಬ ಜನಪ್ರಿಯ ಧಾರಾವಾಹಿಯಲ್ಲಿ ಗೌರಿ ಬಸುರಿಯೆಂಬುದನ್ನೂ, ಅದಕ್ಕೆ ತಾನು ಕಾರಣ ಎಂಬುದನ್ನೂ ಮಹೇಶ ಸ್ಪಷ್ಟವಾಗಿ ನಿರಾಕರಿಸುತ್ತಾನೆ. ಸಫಲಮ್ಮನ ಸನ್ನಿಧಿಯಲ್ಲಿ ಜ್ವರತಪ್ತನಾಗಿ ಮೈಮೇಲಿನ ಪರಿವೆಯೇ ಇಲ್ಲದ ಮಹೇಶ ಗೌರಿಯೊಡನೆ ಕೂಡಿದ ಎಂಬುದೇ ಅಸಂಗತ. ಮಹೇಶ ಗೌರಿಯ ಗರ್ಭಕ್ಕೆ ತಾನು ಹೊಣೆಯಲ್ಲ ಎಂದಿದ್ದು ಸೂಕ್ಷ್ಮಮನಸ್ಸಿನ ಭಾಗ್ಯಳಿಗೆ ಮಾನಸಿಕ ಆಘಾತ ಉಂಟುಮಾಡಿ ಅವಳನ್ನು ಬಲಿತೆಗೆದುಕೊಳ್ಳುತ್ತದೆ.

–ಅಮೃತ ಸೋಮೇಶ್ವರ, ಕೋಟೆಕಾರು